1584ನೇ ಚು.ಗು SL NO:- 45  13-03-2026

# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯದ ಕುರಿತು.**

**ವಿಷಯ:-**

"ನೇತ್ರಾವತಿ ಒಡಲು ಕಲುಷಿತ! ಬಂಟ್ವಾಳ, ಮಂಗಳೂರಿಗೆ ನೀರುಣಿಸುವ ನದಿ, ಜನರ ಆರೋಗ್ಯಕ್ಕೆ ಹಾನಿಕರ, ಮೌನಕ್ಕೆ ಜಾರಿದ ಆಡಳಿತ" ಎಂಬ ಶೀರ್ಷಿಕೆಯಡಿ ದಿನಾಂಕ: 11/03/2026ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಮಂಗಳೂರು ಹಾಗೂ ಬಂಟ್ವಾಳದ ಜನತೆಗೆ ಕುಡಿಯುವ ನೀರು ಪೂರೈಸುತ್ತಿರುವ ನೇತ್ರಾವತಿ ನದಿಗೆ ಬಂಟ್ವಾಳ ಸುತ್ತಮುತ್ತ ಕೊಳಚೆ ನೀರು ಸೇರುತ್ತಿರುವುದು 2018ರ ವಿಧಾನಸಭೆ ಚುನಾವಣೆ ಸಂದರ್ಭ ಪ್ರಚಾರದ ವಸ್ತುವಾಗಿತ್ತು. ಈ ಕುರಿತು ಸಾಕಷ್ಟು ಟೀಕೆ, ಪ್ರತಿಟೀಕೆಗಳು, ಚರ್ಚೆಗಳು ನಡೆದವು. ಈಗ 2026, ಸಮಸ್ಯೆ ಇನ್ನೂ ಬಗೆಹರಿದಿಲ್ಲ.

2017ರ ಫೆಬ್ರುವರಿಯಲ್ಲಿ ವಿಜಯ ಕರ್ನಾಟಕ ಸಚಿತ್ರ ವರದಿ ಪ್ರಕಟಿಸುವ ಮೂಲಕ ನದಿ ನೀರು ಮಲೀನಗೊಳ್ಳುತ್ತಿರುವ ಕುರಿತು ಗಮನ ಸೆಳೆದಿತ್ತು. ಒಮ್ಮೆ ಎಚ್ಚೆತ್ತಂತೆ ಮಾಡಿದ ಆಡಳಿತ ಮತ್ತೆ ಮೌನ ವಹಿಸಿತ್ತು. 2025ರ ಮಾರ್ಚ್‌ನಲ್ಲಿ ಮತ್ತೆ ಈ ಕುರಿತು ವಿಸ್ತಾರವಾದ ವರದಿ ಪ್ರಕಟಿಸಿತ್ತು. ಈ ವರದಿ ಗಮನಿಸಿದ ಮಂಗಳೂರಿನ ಜಾಗೃತ ಹಿರಿಯ ನಾಗರಿಕರು, ಸ್ಥಳ ಸಮೀಕ್ಷೆ ಮಾಡಿ ಮಂಗಳೂರಿನಲ್ಲಿ ಸಂಬಂಧ ಪಟ್ಟ ಉನ್ನತಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು. ಈ ವಿಷಯದಲ್ಲಿ ಜಿಲ್ಲಾಡಳಿತ ಮೌನಕ್ಕೆ ಶರಣಾಗುವುದು ಜನರ ಆರೋಗ್ಯ ದೃಷ್ಟಿಯಿಂದ ಹಿತಕರವಲ್ಲ ಎಂದು ಸಲಹೆ ನೀಡಿದ್ದ ಮನವಿ ಅಲ್ಲೇ ಬಾಕಿಯಾಗಿದೆ. ಪರಿಸ್ಥಿತಿ ಇಂದಿಗೂ ಹಾಗೇ ಇದೆ.

ಬಂಟ್ವಾಳ ಪುರಸಭೆ ವ್ಯಾಪ್ತಿಯಲ್ಲಿ ಸಮರ್ಪಕ ಒಳಚರಂಡಿ ವ್ಯವಸ್ಥೆ ಇಲ್ಲದೆ ಇರುವುದು ಈ ಸಮಸ್ಯೆಗೆ ಮುಖ್ಯ ಕಾರಣವಾಗಿದೆ. ದಿನನಿತ್ಯ ಸುಮಾರು 10 ಸಾವಿರಕ್ಕೂ ಅಧಿಕ ಮನೆಗಳ ಕೊಳಚೆ ನೀರು ನದಿಯ ಒಡಲು ಸೇರುತ್ತಿದೆ.

ಕೊಳಚೆ ನೀರು ಸಂಸ್ಕರಣಾ ಘಟಕ (ಎಸ್.ಟಿ.ಪಿ)ಗಳ ನಿರ್ಮಾಣಕ್ಕೆ ಜಾಗದ ವಿವಾದ ಅಂತಿಮಗೊಳ್ಳದೇ ಇರುವುದರಿಂದ ಒಳಚರಂಡಿ ವ್ಯವಸ್ಥೆ ಅನುಷ್ಠಾನ ಸಾಧ್ಯವಾಗಿಲ್ಲ. ಹಲವು ವರ್ಷಗಳ ಹಿಂದೆ ಪೈಪ್ ಲೈನ್ ಅಳವಡಿಸಿ ಅಲ್ಲಲ್ಲಿ ಮ್ಯಾನ್‌ಹೋಲ್‌ಗಳನ್ನು ಮಾಡಿದ್ದರೂ ವ್ಯರ್ಥವಾಗಿದೆ.

ಬಡ್ಡಕಟ್ಟೆ, ಕೆಳಗಿನ ಪೇಟೆ, ಕಂಚಿಗಾರ ಪೇಟೆ, ಗೂಡಿನಬಳಿ, ಕೈಕುಂಡೆ, ಪಾಣೆಮಂಗಳೂರು, ಪರ್ಲಿಯಾ, ತಲಪಾಡಿವರೆಗೆ ಹಲವು ಕಡೆಗಳಲ್ಲಿ ಮೋರಿ, ರಾಜಕಾಲುವೆಗಳ ಮೂಲಕ ಹರಿದು ಹೋಗುವ ಕೊಳಚೆ ನೀರು ನೇರವಾಗಿ ನದಿ ಸೇರುತ್ತಿದೆ. ಮನೆಗಳು, ವಸತಿ ಸಮುಚ್ಚಯಗಳ

ಶೌಚಾಲಯಗಳ ನೀರು, ಹೋಟೆಲ್ ತ್ಯಾಜ್ಯಗಳು, ಕೋಳಿ ಸಹಿತ ಮಾಂಸದ ಅಂಗಡಿಗಳ ನೀರು ಸೇರಿದಂತೆ ಎಲ್ಲ ರೀತಿಯ ಕೊಳಚೆ ನೀರು ಕೂಡ ನೇರವಾಗಿ ನದಿ ಸೇರುತ್ತಿದೆ. ವಸತಿ ಸಮುಚ್ಚಯಗಳು ತಮ್ಮಲ್ಲೇ ಎಸ್.ಟಿ.ಪಿಗಳನ್ನು ಮಾಡಿ ಕೊಳಚೆಯನ್ನು ಶುದ್ಧೀಕರಿಸಿಯೇ ಹೊರಗೆ ಬಿಡಬೇಕು ಎಂಬ ನಿಯಮವಿದ್ದರೂ, ಬಂಟ್ವಾಳ ನಗರ ವ್ಯಾಪ್ತಿಯ ಬಹುತೇಕ ವಸತಿ ಸಮುಚ್ಚಯಗಳು ಎಷ್ಟು ಪಾಲಿಸುತ್ತಿದ್ದಾರೆ ಎಂಬ ಕುರಿತು ಪುರಸಭೆ ಸರ್ವೆ ಮಾಡಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಬಂಟ್ವಾಳ ಪುರಸಭೆ ವ್ಯಾಪ್ತಿಗೆ ಕುಡಿಯುವ ನೀರು ಪೂರೈಸಲು ನೀರೆತ್ತುವ ಜಾಗಗಳಲ್ಲೇ ಕೊಳಚೆ ನೀರು ನದಿಗೆ ಸೇರುತ್ತಿದ್ದರೆ, ವಲಸೆ ಕಾರ್ಮಿಕರ ತಂಡ ಅಲ್ಲಿಯೇ ಸ್ನಾನ, ಶೌಚಾದಿಗಳನ್ನು ಮಾಡುತ್ತಿವೆ.

ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಕೊಳಚೆ ನೀರು ಸಂಸ್ಕರಣಾ ಘಟಕದ ಜಾಗದ ವಿವಾದವನ್ನು ಬಗೆಹರಿಸಿ, ಯೋಜನೆಯನ್ನು ಶೀಘ್ರ ಅನುಷ್ಠಾನಿಸುವುದರ ಜೊತೆಗೆ, ಕೊಳಚೆ ನೀರನ್ನು ನದಿಗೆ ಬಿಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ಮಾನ್ಯ ಪೌರಾಡಳಿತ ಮಂತ್ರಿಗಳನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:-**

ಬಂಟ್ವಾಳ ಪಟ್ಟಣದಲ್ಲಿ ಪ್ರಸ್ತುತ 44,000 ಗಳಷ್ಟು ಜನಸಂಖ್ಯೆಯಿದ್ದು, ಪಟ್ಟಣಕ್ಕೆ ನೇತ್ರಾವತಿ ನದಿ ಮೂಲದಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಆದರೆ ಪಟ್ಟಣದಲ್ಲಿ ಉತ್ಪನ್ನವಾಗುವ ಮಲೀನ ನೀರನ್ನು ಶುದ್ಧೀಕರಿಸಲು ಸೂಕ್ತ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ.

ಬಂಟ್ವಾಳ ಪುರಸಭೆ ವ್ಯಾಪ್ತಿಯಲ್ಲಿ ಕ.ನ.ನೀ.ಸ ಮತ್ತು ಒ.ಚ. ಮಂಡಳಿಯ ವತಿಯಿಂದ ರೂ.12.27 ಕೋಟಿಗಳ ವೆಚ್ಚದಲ್ಲಿ ಮೊದಲನೇ ಹಂತದ ಒಳಚರಂಡಿ ವ್ಯವಸ್ಥೆ ಕಲ್ಪಿಸಲು 2008-09ನೇ ಸಾಲಿನಲ್ಲಿಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಸದರಿ ಯೋಜನೆಯಡಿ 30.50 ಕಿ.ಮೀ ಉದ್ದದ ಒಳಚರಂಡಿ ಕೊಳವೆ ಮಾರ್ಗ ಅಳವಡಿಕೆಯ ಕಾಮಗಾರಿಗಳನ್ನು 2014-15ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗಿರುತ್ತದೆ. ಆದರೆ, ಒಳಚರಂಡಿ ಜಾಲವನ್ನು ಚಾಲನೆಗೊಳಿಸಲು ಅಗತ್ಯವಿರುವ ವೆಟ್ ವೆಲ್‌ಗಳನ್ನು ಮತ್ತು ಮಲೀನ ನೀರು ಶುದ್ಧೀಕರಣ ಘಟಕಗಳನ್ನು ನಿರ್ಮಿಸಲು ಅಗತ್ಯವಿರುವ ಸೂಕ್ತ ಜಾಗಗಳನ್ನು ಹಸ್ತಾಂತರಿಸಲು ನಗರ ಸ್ಥಳೀಯ ಸಂಸ್ಥೆಯು ವಿಳಂಬವಾದ ಕಾರಣ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ.

ಬಂಟ್ವಾಳ ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಚಾಲನೆಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ತರಲು 7 ಸಂಖ್ಯೆ ವೆಟ್ ವೆಲ್ ಗಳು, 2 ಸಂಖ್ಯೆ ಬಳಸಿದ ನೀರು ಶುದ್ಧೀಕರಣ ಘಟಕಗಳನ್ನು ನಿರ್ಮಿಸುವ ಮತ್ತು ಇತರೆ ಕಾಮಗಾರಿಗಳನ್ನು ಕೈಗೊಳ್ಳಲು

ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ 18 ಯು.ಡಿ.ಎಸ್ 2015, ದಿನಾಂಕ:30-11-2017 ರಲ್ಲಿ ರೂ.56.54 ಕೋಟಿಗಳ ಅಂದಾಜುಪಟ್ಟಿಗೆ 2017ನೇ ಸಾಲಿನಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಆದರೆ, ಪ್ರಸ್ತುತ ಲಭ್ಯವಿರುವ 5 ಸಂಖ್ಯೆ ವೆಟ್ ವೆಲ್ ಗಳ ಹಾಗೂ 1 ಸಂಖ್ಯೆ ಬಳಸಿದ ನೀರು ಶುದ್ಧೀಕರಣ ಘಟಕದ ಜಮೀನುಗಳನ್ನು ಪರಿಗಣಿಸಿ ಸದರಿ ವಲಯಗಳಲ್ಲಿ ಅಳವಡಿಸಲಾಗಿರುವ ಒಳಚರಂಡಿ ಕೊಳವೆ ಮಾರ್ಗಗಳನ್ನು ಚಾಲನೆಗೊಳಿಸಲು ಯೋಜಿಸಲಾಗಿರುತ್ತದೆ.

ಅದರಂತೆ, ಈ ಹಿಂದೆ ಅನುಮೋದನೆಗೊಂಡಿದ್ದ ರೂ.56.54 ಕೋಟಿಗಳ ಒಳಚರಂಡಿ ಯೋಜನೆಯ ಅಂದಾಜುಪಟ್ಟಿಯಲ್ಲಿ ಅನುವು ಮಾಡಲಾಗಿದ್ದ ಬಳಸಿದ ನೀರು ಶುದ್ಧೀಕರಣ ಘಟಕದ (STP) ನಿರ್ಮಾಣ ಕಾಮಗಾರಿಯನ್ನು ಹೊರತುಪಡಿಸಿ, ಪುರಸಭಾ ವ್ಯಾಪ್ತಿಯ 5 ವಲಯಗಳ ಒಳಚರಂಡಿ ವ್ಯವಸ್ಥೆಯನ್ನು ಚಾಲನೆಗೊಳಿಸಲು ಈ ಕೆಳಕಂಡ 5 ಸಂಖ್ಯೆ ವೆಟ್ ವೆಲ್ ಗಳ ನಿರ್ಮಾಣ ಹಾಗೂ ಪೂರಕ ಕಾಮಗಾರಿಗಳನ್ನು ಕೈಗೊಳ್ಳಲು ರೂ.44.65 ಕೋಟಿಗಳ ಮಾರ್ಪಡಿತ ಅಂದಾಜುಪಟ್ಟಿಯು ಮಂಡಳಿಯಿಂದ ದಿನಾಂಕ:26-01-2026ರಲ್ಲಿ ಆಡಳಿತಾತ್ಮಕ ಅನುಮೋದನೆ ಕೋರಿ ಸರ್ಕಾರಕ್ಕೆ ಸ್ವೀಕೃತವಾಗಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.

| ಕ್ರ. ಸಂ. | ಕಾಮಗಾರಿಗಳು | ಪ್ರಮಾಣ |
|---|---|---|
| 1 | ಒಳಚರಂಡಿ ಕೊಳವೆ ಮಾರ್ಗ ಅಳವಡಿಕೆ | 5.00 ಕಿ.ಮೀ |
| 2 | ವೆಟ್ ವೆಲ್ ಕಂ ಪಂಪ್ ಹೌಸ್ ಮತ್ತು ಪಂಪಿಂಗ್ ಮೆಶಿನರಿ ಅಳವಡಿಕೆ | 5 ಸಂಖ್ಯೆ |
| 3 | ಒಳಚರಂಡಿ ಏರುಕೊಳವೆ ಮಾರ್ಗ ಅಳವಡಿಕೆ | 5.8 ಕಿ.ಮೀ |
| 4 | ಒಳಚರಂಡಿ ಗೃಹ ಸಂಪರ್ಕಗಳು | 3000 ಸಂಖ್ಯೆ |

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ನಅಇ 05 ಸಿಎಸ್ಎಸ್ 2023, ದಿನಾಂಕ: 25.06.2025 ರಲ್ಲಿ SBM 2.0 ಯೋಜನೆಯಡಿ ಬಂಟ್ವಾಳ ಪುರಸಭೆ ವ್ಯಾಪ್ತಿಯಲ್ಲಿ 6.13 ಎಂ.ಎಲ್.ಡಿ ಸಾಮರ್ಥ್ಯದ ಬಳಸಿದ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಲು ರೂ.11.03 ಕೋಟಿಗಳ ಅನುದಾನ ಮಂಜೂರು ಮಾಡಲಾಗಿರುತ್ತದೆ. ಈ ಯೋಜನೆಯಡಿ ನಗರ ಸ್ಥಳೀಯ ಸಂಸ್ಥೆಯು ಮಲಿನ ನೀರು ಸಂಸ್ಕರಣಾ ಘಟಕ(STP) ನಿರ್ಮಾಣಕ್ಕೆ ಬಂಟ್ವಾಳ ತಾಲ್ಲೂಕು, ಬಿ.ಮೂಡ ಗ್ರಾಮದ ಸರ್ವೆ ನಂಬರ್ 101-1A2 ರಲ್ಲಿ 044 ಎಕರೆ, 308-6 ರಲ್ಲಿ 0.48 ಎಕರೆ, 308-6 ರಲ್ಲಿ 0.39 ಎಕರೆ ಒಟ್ಟು 1.31 ಎಕರೆ ಜಾಗವನ್ನು ಗುರುತಿಸಲಾಗಿದ್ದು, ಬಂಟ್ವಾಳ ನಗರದಲ್ಲಿ 2026ರ ಜನಸಂಖ್ಯೆಯ ಅಗತ್ಯಕ್ಕೆ ಅನುಗುಣವಾಗಿ ಕರಡು ವಿಸ್ತೃತ ಯೋಜನಾ ವರದಿಯ(DPR) ಸಿದ್ಧಪಡಿಸಿದ್ದು, ಸದರಿ ಅಂದಾಜು ಪಟ್ಟಿಯು ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಸರ್ಕಾರಕ್ಕೆ

ಸ್ವೀಕೃತವಾದ ಪ್ರಸ್ತಾವನೆಗೆ ದಿನಾಂಕ:13.03.2026 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮೇಲೆ ತಿಳಿಸಿರುವ ಕಾಮಗಾರಿಗಳನ್ನು ಮತ್ತು SBM 2.0 ಯೋಜನೆಯಡಿ 6.13 ಎಂ.ಎಲ್.ಡಿ ಸಾಮರ್ಥ್ಯದ ಬಳಸಿದ ನೀರು ಶುದ್ಧೀಕರಣ ಘಟಕದ ಕಾಮಗಾರಿಯನ್ನು ಕೈಗೊಳ್ಳುವುದರಿಂದ ಬಂಟ್ವಾಳ ಪುರಸಭೆ ವ್ಯಾಪ್ತಿಯ 5 ಒಳಚರಂಡಿ ವಲಯಗಳಾದ ವಲಯ-1, 2, 3, 6 ಮತ್ತು 7 ಗಳನ್ನು ಚಾಲನೆಗೊಳಿಸಿ, ಪ್ರಸ್ತುತ ನೇತ್ರಾವತಿ ನದಿಯು ಬಳಸಿದ ನೀರಿನಿಂದ ಕಲುಷಿತಗೊಳ್ಳುತ್ತಿರುವುದನ್ನು ತಡೆಯಬಹುದಾಗಿದೆ. ಉಳಿದಂತೆ ವಲಯ-4 ಮತ್ತು 5ರಲ್ಲಿ ಉತ್ಪನ್ನವಾಗುವ ಬಳಸಿದ ನೀರನ್ನು Interception and Diversion ಮುಖಾಂತರ SBM 2.0 ಯೋಜನೆಯಡಿ ನಿರ್ಮಿಸಲಾಗುವ 6.13 ಎಂ.ಎಲ್.ಡಿ. ಸಾಮರ್ಥ್ಯದ ಬಳಸಿದ ನೀರು ಶುದ್ಧೀಕರಣ ಘಟಕದಲ್ಲಿ ಸಂಸ್ಕರಿಸಲು ಕ್ರಮವಹಿಸಲಾಗುವುದು.

ಈ ಮೇಲೆ ತಿಳಿಸಿರುವ ಎಲ್ಲಾ ಕಾಮಗಾರಿಗಳನ್ನು ಕೈಗೊಂಡು ಬಂಟ್ವಾಳ ಪಟ್ಟಣದಲ್ಲಿ ಈಗಾಗಲೇ ಅಳವಡಿಸಲಾಗಿರುವ ಒಳಚರಂಡಿ ಜಾಲವನ್ನು ಚಾಲನೆಗೊಳಿಸಿ, ಒಳಚರಂಡಿ ವ್ಯವಸ್ಥೆಯನ್ನು ಸಾರ್ವಜನಿಕರ ಉಪಯೋಗಕ್ಕೆ ತಂದು ನೇತ್ರಾವತಿ ನದಿಯು ಕಲುಷಿತಗೊಳ್ಳುತ್ತಿರುವುದನ್ನು ತಡೆಯಬಹುದಾಗಿರುತ್ತದೆ.

ಸಂಖ್ಯೆ:ನಅಇ 49 ಯುಎಂಎಸ್ 2026.

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು.